**OS** 233/2003 **DW** –1

**ದಿ:01.04.2026 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಪಾಟೀ ಸವಾಲುಃ ಪ್ರತಿವಾದಿ ನಂಬರ 9 ರ ಪರ ವಕೀಲರಾದ ಶ್ರೀ ಆರ.ಜಿ. ಡಿ ರವರಿಂದ.**

ಜ್ಯೋತಿಬಾ ಎಂದರೆ ನನ್ನ ಅಣ್ಣನಾಗಬೇಕು. ಈ ಕೇಸನ್ನು ಯಾವ ಕಾರಣಕ್ಕೆ ಹಾಕಿದ್ದಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ಸಾಕ್ಷಿಗೆ ನಿಶಾನೆ ಪಿ 19 ನ್ನು ತೋರಿಸಿ ಈ ಕಾಗದವನ್ನು ಏಲ್ಲಿ ಯಾವಾಗ ತಯಾರಿಸಲಾಯಿತು ನೋಡಿ ಹೇಳಿ ಎಂದರೆ ಸಾಕ್ಷಿ ನನಗೆ ಓದಲು ಬರುವುದಿಲ್ಲ ಎನ್ನುತ್ತಾರೆ. ನನ್ನ ಹೆಸರು ಅಶೋಕ. ನಿಶಾನೆ ಪಿ 19 ಮತ್ತು ನಿಶಾನೆ ಪಿ 20 ರಲ್ಲಿರುವ ಇರುವುದು ನಿಮ್ಮ ಸಹಿಯಾ ಎಂದು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅವುಗಳನ್ನು ನೋಡಿ ಹೌದು ಎನ್ನುತ್ತಾರೆ. ಸದರಿ ಸಹಿಗಳನ್ನು ನಿಶಾನೆ ಪಿ 19(ಬಿ) ಮತ್ತು ನಿಶಾನೆ ಪಿ 20(ಬಿ) ಎಂದು ಗುರ್ತಿಸಲಾಯಿತು. ಸದರಿ ಎರಡು ಸಹಿಗಳನ್ನು ಎಲ್ಲಿ ಮಾಡಿದೀರಿ ಎಂದರೆ ಸಾಕ್ಷಿ ಮನೆಯಲ್ಲಿಯೆ ಮಾಡಿರುತ್ತೇನೆ ಎನ್ನುತ್ತಾರೆ. ಸದರಿ ಎರಡು ದಾಖಲೆಗಳಿಗೆ ಜ್ಯೋತಿಬಾ, ಮಲ್ಲಪ್ಪ, ರಾಮಪ್ಪ, ಗಂಗಪ್ಪ, ಮಾರುತಿ ತಂದೆ ಕೃಷ್ಣಪ್ಪಾ ಬೆನಕಟ್ಟಿ, ಮೈನವ್ವ ಮತ್ತು ಸುಭದ್ರಾ ಇವರು ಸಹಿ ಮಾಡಿರುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಸದರಿ ಸಹಿಯನ್ನು ನೀವು ಯಾವುದಗೋಸ್ಕರ ಮಾಡಿದೀರಿ ಎಂದರೆ ನನ್ನ ಅಣ್ಣ ಪ್ರತಿವಾದಿ ನಂಬರ 1 ತೆಗೆದುಕೊಂಡು ಬಂದು ಸಹಿ ಮಾಡು ಎಂದು ಹೇಳಿರುವ ಕಾರಣಕ್ಕೆ ಮಾಡಿರುತ್ತೇನೆ ಎನ್ನುತ್ತಾರೆ. 2 ದಾಖಲೆಗಳಿಗೂ ನನ್ನ ತಂಗಿ ಪಾರ್ವತಿ ಸಹಿ ಮಾಡಿಲ್ಲವೆಂದರೆ ಸಾಕ್ಷಿ ಮಾಡಿರಬಹುದು ಎನ್ನುತ್ತಾರೆ. ಸದರಿ ದಾಖಲೆ ಮಾಡಬೇಕಾದರೆ ಪಾರ್ವತಿ ಇವರು ಸಹಿ ಮಾಡಿಲ್ಲವೆಂದರೆ ಸಾಕ್ಷಿ ಮಾಡಿರುತ್ತಾರೆ ಎನ್ನುತ್ತಾರೆ. ನಿಶಾನೆ ಪಿ 21 ಮತ್ತು ನಿಶಾನೆ ಪಿ 22 ನ್ನು ಸಾಕ್ಷಿಗೆ ತೋರಿಸಿ ಅದರಲ್ಲಿ ನಿಮ್ಮ ಸಹಿ ಏಲ್ಲಿ ಇದೆ ಎಂದರೆ ಸಾಕ್ಷಿ ದಾಖಲೆಯಲ್ಲಿರುವ ಸಹಿಯನ್ನು ನೋಡಿ ತನ್ನದ್ದು ಎಂದು ಗುರ್ತಿಸಿರುತ್ತಾರೆ. ಸದರಿ ಸಹಿಯನ್ನು ನಿಶಾನೆ ಪಿ 21(ಬಿ) ಹಾಗೂ ನಿಶಾನೆ ಪಿ 22(ಬಿ) ಎಂದು ಗುರ್ತಿಸಲಾಯಿತು.

ಸದರಿ ದಾಖಲೆಗಳಿಗೆ ಪ್ರತಿವಾದಿ ನಂಬರ 9 ರವರನ್ನು ಬಿಟ್ಟು ಉಳಿದವರೆಲ್ಲರು ಸಹಿ ಮಾಡಿದ್ದಾರೆಂದು ಪಾರ್ವತಿರವರು ಹೇಳುತ್ತಾರೆಂದರೆ ಸಾಕ್ಷಿ ಹೌದು ಎನ್ನುತ್ತಾರೆ. ನಿಶಾನೆ ಪಿ 21 ಹಾಗೂ ನಿಶಾನೆ ಪಿ 22 ನ್ನು ತೋರಿಸಿ ಅದರಲ್ಲಿ ಪಾರ್ವತಿ ಇವರ ಸಹಿ ಎಲ್ಲಿ ಇದೆ ಎಂದು ಹೇಳುತ್ತೀರಾ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎನ್ನುತ್ತಾರೆ. ದಾವಾ ಆಸ್ತಿ ಸರ್ವೆ ನಂಬರ 627/3 ಹಾಗೂ 623/4 ಸಿ/1 ಇವುಗಳು ಇವತ್ತಿಗೂ ಶೇತ್ಕಿ ಜಮೀನುಗಳು ಎಂದರೆ ಸರಿ. ಇವುಗಳನ್ನು ಈಗ ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿ ನಾವೇ ಮಾಡುತ್ತಿದ್ದೇವೆ ಎನ್ನುತ್ತಾರೆ. ನೀವು ಅಂದರೆ ನಿಮ್ಮ ತಂದೆಯ ವಾರಸುದಾರರ ಎಲ್ಲರ ಪೈಕಿ ನಾನು ಮಾಡುತ್ತಿದ್ದೇನೆಂದರೆ ಸರಿ.

ಮರು ವಿಚಾರಣೆಃ ಇಲ್ಲ

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

1 ನೇ ಅಧಿಕ ಹಿ.ದಿ.ನ್ಯಾಹುಬ್ಬಳ್ಳಿ